ಎ.ಡಿ.ಬಿ.ಯೋಜನೆಗಳ ಕಾಮಗಾರಿಗಳನ್ನು ಪ್ರಾರಂಭಿಸುವುದು

14. ಅನುಬಂಧ–1

424 : (445)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಸಿಂಧನೂರಿನಲ್ಲಿ ಎ.ಡಿ.ಬಿ ಯೋಜನೆಯಡಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆ ವಿಳಂಬವಾಗಲು ಕಾರಣಗಳೇನು?

ಇ) ಈಗಾಗಲೇ ಸಾರ್ವಜನಿಕರಿಂದ ಹಣ ಪಾವತಿಸಿಕೊಂಡು ಐದು ವರ್ಷಗಳೇ ಕಳೆದಿದ್ದರೂ ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣಗಳೇನು?

ಈ) ಸರ್ಕಾರ ಪ್ರಸಕ್ತ ಸಾಲಿನಲ್ಲಾದರೂ ಈ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಉ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

ಅ) ಬಂದಿದೆ.

ಆ), ಇ)

1. ಕುಡಿಯುವ ನೀರಿನ ಯೋಜನೆಯ ಜಲಸಂಗ್ರಹಗಾರಕ್ಕಾಗಿ 259.26 ಎಕರೆ ಭೂಮಿಯ ಅಗತ್ಯವಿದ್ದು, ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಳಿಸಲಾಗಿದ್ದು, ನಂತರ ಭೂ–ಖರೀದಿ ನಿರ್ಧಾರ ಕೈಗೊಳ್ಳಲಾಗಿರುತ್ತದೆ. ಭೂಖರೀದಿಗಾಗಿ ಭೂಮಾಲೀಕರೊಂದಿಗೆ ಬೆಲೆ ನಿಗಧಿಪಡಿಸಲು ಮಾತುಕತೆ ನಡೆಸಿ ನಂತರ ಖರೀದಿಗಾಗಿ ಸರ್ಕಾರದ ಒಪ್ಪಿಗೆ ಪಡೆಯಲು ವಿಳಂಬವಾಗಿದೆ.

2. ಒಳಚರಂಡಿ ಯೋಜನೆಯ ತ್ಯಾಜ್ಯ ನೀರು ಸಂಸ್ಕರಣ ಘಟಕಕ್ಕಾಗಿಯೂ 20.16 ಎಕರೆ ಭೂಮಿ ಖರೀದಿಗಾಗಿ ಭೂಮಾಲೀಕರೊಂದಿಗೆ ಭೂಮಿಯ ಬೆಲೆ ನಿಗಧಿಪಡಿಸಲು ಮಾತುಕತೆ ನಡೆಸಿ ನಂತರ ಖರೀದಿಗಾಗಿ ಸರ್ಕಾರದ ಒಪ್ಪಿಗೆ ಪಡೆಯಲು ವಿಳಂಬವಾಗಿದೆ.

3. ಎ.ಡಿ.ಬಿ. ಮತ್ತು ಕೇಂದ್ರ ಸರ್ಕಾರದ ನಿಯಮ ಅನ್ವಯ ಭೂ ಸ್ವಾಧೀನ/ಭೂ ಖರೀದಿ ಪ್ರಕ್ರಿಯೆ ಪೂರ್ಣಗೊಂಡನಂತರವೇ ಟೆಂಡರ್ ಕರೆಯಬೇಕಾಗಿದ್ದು, ಅದರಂತೆ, ದಿನಾಂಕ:03-10-2011ರಂದು ಕುಡಿಯುವ ನೀರಿನ ಯೋಜನೆಯ ಟೆಂಡರ್ ಕರೆಯಲಾಗಿದೆ. ಅತೀ ಕಡಿಮೆ ದರ ನಮೂದಿಸಿದ ಬಿಡ್‌ದಾರರು (Bidder) ನಮೂದಿಸಿದ ಬಿಡ್ ಪ್ರೀಮಿಯಮ್ ಶೇ.40.85% ಆಗಿದ್ದು, ಈ ಬಿಡ್ ಪ್ರೀಮಿಯಮ್ ಸಾಮಾನ್ಯವಾಗಿ ನೀರು ಸರಬರಾಜಿಗೆ ನಮೂದಿಸಲಾಗುವ ಬಿಡ್ ಪ್ರೀಮಿಯಮ್‌ಗೆ ಹೋಲಿಸಿದ್ದಲ್ಲಿ ಅಧಿಕವಾದುದ್ದರಿಂದ, ಕಾರ್ಯಕ್ರಮದ ಅಧಿಕಾರಯುಕ್ತ ಸಮಿತಿ ಬಿಡ್ ತಿರಸ್ಕರಿಸಿದೆ.

4. ದಿನಾಂಕ: 16-02-2012 ರಂದು ಒಳಚರಂಡಿ ಟೆಂಡರ್ ಕರೆಯಲಾಗಿದ್ದು, ಅತೀ ಕಡಿಮೆ ದರ ನಮೂದಿಸಿದ ಬಿಡ್‌ದಾರರು ನಮೂದಿಸಿದ ಬಿಡ್ ಪ್ರೀಮಿಯಮ್ ಶೇ. 94.66% ಆಗಿದ್ದು, ಈ ಬಿಡ್ ಪ್ರೀಮಿಯಮ್ ಸಾಮಾನ್ಯವಾಗಿ ಒಳಚರಂಡಿಗೆ ನಮೂದಿಸಲಾಗುವ ಬಿಡ್ ಪ್ರೀಮಿಯಮ್‌ಗೆ ಹೋಲಿಸಿದ್ದಲ್ಲಿ ಅತ್ಯಧಿಕವಾದುದ್ದರಿಂದ, ಬಿಡ್ ತಿರಸ್ಕರಿಸಲಾಗಿದೆ. ಕಾರ್ಯಕ್ರಮದ ಅಧಿಕಾರಯುಕ್ತ ಸಮಿತಿ ಬಿಡ್ ತಿರಸ್ಕರಿಸಿದೆ.

5. ಎರಡನೇ ಬಾರಿಗೆ ಒಳಚರಂಡಿ ಹಾಗೂ ನೀರು ಸರಬರಾಜು ಕಾಮಗಾರಿ ಸಂಯೋಜಿಸಿ 21-06-2012ರಂದು ಟೆಂಡರ್ ಕರೆಯಲಾಗಿದ್ದು, 3 ಬಿಡ್‌ದಾರರು ಬಿಡ್‌ಸಲ್ಲಿಸಿದ್ದು, ಮೌಲ್ಯಮಾಪನದಲ್ಲಿ ಅರ್ಹರಾದ ಒಬ್ಬರೇ ಬಿಡ್‌ದಾರರು ನಮೂದಿಸಿದ ಬಿಡ್ ಪ್ರೀಮಿಯಂ ಶೇ.80.81% ಇರುತ್ತದೆ. ಸಗಟು ನೀರು ಸರಬರಾಜಿಗಾಗಿ 21-06-2012ರಂದು ಟೆಂಡರ್ ಕರೆಯಲಾಗಿದ್ದು, 2 ಬಿಡ್‌ದಾರರು ಬಿಡ್‌ಸಲ್ಲಿಸಿದ್ದು, ಮೌಲ್ಯಮಾಪನದಲ್ಲಿ ಅರ್ಹರಾದ ಒಬ್ಬರೇ ಬಿಡ್‌ದಾರರು ನಮೂದಿಸಿದ ಬಿಡ್ ಪ್ರೀಮಿಯಂ

ಶೇ.64.13% ಇರುತ್ತದೆ. ಈ ಎರಡು ಬಿಡ್ ಪ್ರೀಮಿಯಮ್‌ಗಳು ಅತ್ಯಧಿಕವಾಗಿರುವ ಹಿನ್ನೆಲೆಯಲ್ಲಿ, ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲು ಎ.ಡಿ.ಬಿ. ಒಪ್ಪಿಗೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಕಾರಣಗಳಿಂದ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಭವಾಗಿರುತ್ತದೆ.

ಈ) ಮತ್ತು ಉ) ಬಿಡ್ ಪ್ರೀಮಿಯಮ್‌ಗಳು ಅತ್ಯಧಿಕವಾಗಿರುವ ಹಿನ್ನೆಲೆಯಲ್ಲಿ, ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲು ಎ.ಡಿ.ಬಿ. ಒಪ್ಪಿಗೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಎ.ಡಿ.ಬಿ. ಒಪ್ಪಿಗೆ ನಂತರ ಮಾತುಕತೆ ನಡೆಸಿ. ಸಫಲವಾದಲ್ಲಿ ಗುತ್ತಿಗೆ ವಹಿಸಿ ಕಾಮಗಾರಿ ಪ್ರಾರಂಭಿಸಲಾಗುವುದು.

ತ್ಯಾಜ್ಯ ಸಂಗ್ರಹ ಶುಲ್ಕ

369 : (462)

ಡಾ ॥ ಮಾಲಕರೆಡ್ಡಿ ಎ.ಬಿ.(ಯಾದಗಿರಿ)

ಅ) ಬೆಂಗಳೂರು ಸುತ್ತಮುತ್ತಲ ಅನೇಕ ರೆವಿನ್ಯೂ ಬಡಾವಣೆಗಳಲ್ಲಿ ನಿರ್ಮಾಣವಾದ ಮನೆಗಳಿಂದ ಕಟ್ಟಡ ತೆರಿಗೆ ಪಾವತಿಸಿಕೊಳ್ಳಲಾಗುತ್ತಿದ್ದು, ಅಲ್ಲಿ ಯಾವುದೇ ರೀತಿಯ ತ್ಯಾಜ್ಯ ವಿಲೇವಾರಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಿ.ಬಿ.ಎಂ.ಪಿ. ಘನತ್ಯಾಜ್ಯ ವಿಲೇಮಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೆವಿನ್ಯೂ ಬಡಾವಣೆಗಳಲ್ಲಿ ರಸ್ತೆ, ನೀರು ಯಾವ ಸೌಲಭ್ಯಗಳಿಲ್ಲದಿದ್ದರೂ ಜನ 2009 ರಿಂದ ತೆರಿಗೆ ಪಾವತಿಸುತ್ತಿದ್ದು, ಈ ಬಡಾವಣೆಗಳಲ್ಲಿ ಪಾಲಿಕೆ ಸಿಬ್ಬಂದಿ ಕಸ ಸಂಗ್ರಹಿಸುತ್ತಿಲ್ಲವಾದರೂ ತೆರಿಗೆಯಲ್ಲಿ ಘನತ್ಯಾಜ್ಯ ವಿಲೇಮಾರಿ ಶುಲ್ಕ ಪಡೆಯುತ್ತಿರುವುದಕ್ಕೆ ಕಾರಣವೇನು;

ಈ) ಈ ಬಡಾವಣೆಗಳಲ್ಲಿ ತ್ಯಾಜ್ಯ ಸಂಗ್ರಹಿಸದೇ ಇರುವುದರಿಂದ ಆ ಶುಲ್ಕವನ್ನು ಪಡೆಯದೇ ಇರಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಹೊರಮಾವು ಓಂ ಶಕ್ತಿ ಬಡಾವಣೆಯಲ್ಲಿ ಕಸ ಸಂಗ್ರಹಿಸುತ್ತಿಲ್ಲವಾದರೂ ತೆರಿಗೆಯೊಂದಿಗೆ ತ್ಯಾಜ್ಯ ಸಂಗ್ರಹ ಶುಲ್ಕ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?